ಸಾಕ್ಷಿಯ ಹೆಸರು : ಮಹಮ್ಮದ್ ಶರೀಪ್

**ದಿನಾಂಕಃ 18–02–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ–**

7. ಸಾಕ್ಷಿಯು ಪೊಯಿನೂರ್ ಶಿಪ್ಪಿಂಗ್ ಕಂಪನಿಗೆ ಸೇರಿದ ಕಾರವಾರದ ಏಜೆನ್ಸಿಯ registration certificate ನ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–146 ಎಂದು ಗುರುತಿಸಲಾಯಿತು. ಸದರಿ ಕಂಪನಿಯ renewal license ನ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–147 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು, ಮೃತ ಪ್ರೇಮ್ ಕುಮಾರನಿಗೆ ಬರೆದುಕೊಟ್ಟ authorization letter ನ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–148 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ವಾಹನದ registration certificate ನ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–149 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ದ್ವಿಚಕ್ರ ವಾಹನವನ್ನು ನ್ಯಾಯಾಲಯದಿಂದ ಬಿಡಿಸಿಕೊಂಡಾಗ ತೆಗೆದ ವಾಹನದ 4 ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ–150 ರಿಂದ ನಿಪಿ–153 ರವರೆಗೆ ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನೂ ಸಹ ನೀಡಿರುತ್ತೇನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

8. ಮೃತ ಪ್ರೇಮ್ ಕುಮಾರನು ಎಷ್ಟು ವಿದ್ಯಾಭ್ಯಾಸ ಮಾಡಿದ್ದನು ಎಂದು ನನಗೆ ಗೊತ್ತಿಲ್ಲ. ಆತ ಎಲ್ಲೆಲ್ಲಿ ಕೆಲಸ ಮಾಡಿದ್ದಾನೆ ಎಂದು ನನಗೆ ಗೊತ್ತಿಲ್ಲ. ಆತನು ಇಂಗ್ಲಿಷ್ ತಿಳಿದವನಾಗಿದ್ದನು. ನಾನು ಕಾರವಾರಕ್ಕೆ ಬರುವುದು ವಿರಳ. ಪೊಯಿನೂರ್ ಶಿಪ್ಪಿಂಗ್ ಏಜೆನ್ಸಿಯು ಕಂಪನಿ ಕಾಯ್ದೆಯಡಿಯಲ್ಲಿ ನೊಂದಾವಣೆಗೊಂಡಿರುವುದಿಲ್ಲ. ಪೊಯಿನೂರ್ ಶಿಪ್ಪಿಂಗ್ ಏಜೆನ್ಸಿಯು proprietorship ಆಗಿರುತ್ತದೆ. ಸದರಿ ಪೊಯಿನೂರ್ ಶಿಪ್ಪಿಂಗ್ ಏಜೆನ್ಸಿಯು ಎಲ್ಲಿಯೂ ನೋಂದಣಿಯಾಗಿರುವುದಿಲ್ಲ. ಮಂಗಳೂರಿನ ಶಾಖೆಯಲ್ಲಿ ಒಟ್ಟು 7–8 ಜನರು ಕೆಲಸ ಮಾಡುತ್ತಿದ್ದಾರೆ ಹಾಗೂ ಕಾರವಾರದ ಶಾಖೆಯಲ್ಲಿ ಒಟ್ಟು 6 ಜನರು ಕೆಲಸ ಮಾಡುತ್ತಿದ್ದರು.

ಮೃತ ಪ್ರೇಮ್ ಕುಮಾರನ ಮನೆಗೆ ಎಂದಿಗೂ ಹೋಗಿಲ್ಲ ಎಂದರೆ ಸಾಕ್ಷಿಯು ನಾನು ಒಂದೆರಡು ಬಾರಿ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯ ಮನೆಗೆ ನಾನು ಎಂದಿಗೂ ಹೋಗಿಲ್ಲ. ಪ್ರೇಮ್ ಕುಮಾರನು ನಮ್ಮ ಶಿಪ್ಪಿಂಗ್ ಏಜೆನ್ಸಿಯಲ್ಲಿ ಕೆಲಸ ಮಾಡಿ, ವೇತನ ಪಡೆಯುತ್ತಿದ್ದ ಎಂಬ ಬಗ್ಗೆ ಬಾಯಿ ಮಾತಿನ ಹೇಳಿಕೆ ಬಿಟ್ಟು ಯಾವುದೇ ವೇತನಾ ಚೀಟಿ ಅಥವಾ ಇನ್ನಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ಮೃತ ಪ್ರೇಮ್ ಕುಮಾರನು ಪೊಯಿನೂರ್ ಶಿಪ್ಪಿಂಗ್ ಏಜೆನ್ಸಿಗೆ ನೇಮಕಗೊಂಡ ಬಗ್ಗೆ ಯಾವುದೇ ನೇಮಕಾತಿ ಪತ್ರ ಇರುವುದಿಲ್ಲ.

9. ಮೃತ ಪ್ರೇಮ್ ಕುಮಾರನಿಗೆ ವೇತನ ಪಾವತಿಸುತ್ತಿದ್ದ ಬಗ್ಗೆ ITR ಯಲ್ಲಿಯೂ ಸಹ ನಮೂದು ಇರುವುದಿಲ್ಲ. ಪೊಯಿನೂರ್ ಶಿಪ್ಪಿಂಗ್ ಏಜೆನ್ಸಿಯು 2018 ರಿಂದ ಕಾರವಾರದಲ್ಲಿ ಕಾರ್ಯನಿರ್ವಹಿಸುತ್ತಿಲ್ಲ ಎಂದರೆ ಸರಿ. ಅದರ ನವೀಕರಣಕ್ಕೂ ಸಹ ನಾವು ಪ್ರಯತ್ನಿಸಿಲ್ಲ ಎಂದರೆ ಸರಿ. ಸದರಿ ಪೊಯಿನೂರ್ ಶಿಪ್ಪಿಂಗ್ ಏಜೆನ್ಸಿಯನ್ನು ನವೀಕರಿಸಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ಸದರಿ ಏಜೆನ್ಸಿಯು ನಷ್ಟದಲ್ಲಿ ನಡೆಯುತ್ತಿದ್ದ ಕಾರಣ, ನಾವು ಅದನ್ನು ನವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ಬೇರೆ ಶಿಪ್ಪಿಂಗ್ ಏಜೆನ್ಸಿಗಳ ಲಾಭ ಮತ್ತು ನಷ್ಟಗಳ ಬಗ್ಗೆ ನಮಗೆ ನೋಡಲು ಬರುವುದಿಲ್ಲ ಎಂದರೆ ಸರಿ. ಯಾವುದೇ ದಾಖಲೆಯನ್ನು ನೋಡದೇ ಶಿಪ್ಪಿಂಗ್ ಏಜೆನ್ಸಿಯು ಲಾಭ ಅಥವಾ ನಷ್ಟದಲ್ಲಿರುತ್ತದೆ ಎಂದು ಹೇಳಲು ಬರುವುದಿಲ್ಲ. ನಾನು ಎರಡು ಬಾರಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಮೊದಲು ಅಭಿಯೋಜಕರನ್ನು ಭೇಟಿ ಮಾಡಿರುವುದಿಲ್ಲ ಮತ್ತು ನಾನು ಯಾವುದೇ ಹೇಳಿಕೆಗಳನ್ನು ಓದಿ ತಿಳಿದುಕೊಂಡಿರುವುದಿಲ್ಲ. ಪೊಲೀಸರು ನನ್ನಿಂದ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ 1 ನೇ ಆರೋಪಿ ಹಾಗೂ ಮೃತ ಪ್ರೇಮ್ ಕುಮಾರನ ನಡುವೆ ವ್ಯವಹಾರದ ಸಂಬಂಧ ವೈಷಮ್ಯ ಉಂಟಾಗಿತ್ತು ಎಂದು ಪ್ರೇಮ್ ಕುಮಾರನು ನನಗೆ ಕರೆ ಮಾಡಿ ಹೇಳುತ್ತಿದ್ದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ಪ್ರೇಮ್ ಕುಮಾರನನ್ನು ಕಾರವಾರದ ಏಜೆನ್ಸಿಗೆ ನೇಮಕ ಮಾಡಿ, ಆತನಿಗೆ ಅಧಿಕಾರ ಪತ್ರ ನೀಡಿ, ವೇತನ ನೀಡುತ್ತಿದ್ದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆತನಿಗೆ ದ್ವಿಚಕ್ರ ವಾಹನ ನೀಡಿದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಹಾಗೂ ಪ್ರೇಮ್ ಕುಮಾರನಿಗೆ ಯಾವುದೇ ಪರಿಚಯ ಇಲ್ಲ ಎಂದರೆ ಸರಿಯಲ್ಲ. ನನಗೆ

ಮತ್ತು 1 ನೇ ಆರೋಪಿಗೆ ಪರಿಚಯ ಇಲ್ಲ ಎಂದರೆ ಸರಿಯಲ್ಲ. ಪ್ರೇಮ್ ಕುಮಾರನಿಗೆ ಹಾಗೂ 1 ನೇ ಆರೋಪಿಗೆ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–19, 20 ಮತ್ತು 21 ರವರ ಪರಿಚಯ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ 1 ನೇ ಆರೋಪಿಯೂ ಸಹ ಶಿಪ್ಪಿಂಗ್ ಕಂಪನಿಯನ್ನು ಹೊಂದಿದ್ದು, ಆತನೂ ಸಹ ಡಾಂಬರ್ ಅನ್–ಲೋಡಿಂಗ್ ವ್ಯವಹಾರವನ್ನು ಮಾಡುತ್ತಾ ಬಂದಿರುತ್ತಾನೆ ಮತ್ತು ಪ್ರೇಮ್ ಕುಮಾರನು ನೋಡಿಕೊಳ್ಳುತ್ತಿದ್ದು, ನಮ್ಮ ಶಿಪ್ಪಿಂಗ್ ಕಂಪನಿಯ ವ್ಯವಹಾರವು ಚೆನ್ನಾಗಿ ನಡೆಯುತ್ತಿದ್ದು, 1 ನೇ ಆರೋಪಿಯ ಶಿಪ್ಪಿಂಗ್ ಕಂಪನಿಯ ವ್ಯವಹಾರ ಕಡಿಮೆಯಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರೇಮ್ ಕುಮಾರನ ಹೆಂಡತಿ ಎಂದಿಗೂ ಕರೆ ಮಾಡಿಲ್ಲ ಎಂದರೆ ಸರಿ. ಚಾಸಾ–20 ರವರಿಗೆ ಕರೆ ಮಾಡಿ ದೂರು ನೀಡಲು ಹೇಳಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಸಾಕ್ಷಿಯು ವಿಚಾರಣೆಗಾಗಿ, ನನಗೆ ಸಮನ್ಸ್ ಬಂದಾಗ ಈ ಪ್ರಕರಣದ ಬಗ್ಗೆ ಮಾಹಿತಿ ತಿಳಿಯಿತು ಎಂದರೆ ಸರಿಯಲ್ಲ.

11. ನಿಪಿ–148 authorization letter ನ್ನು ನೋಟರಿಯವರ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ದಾಖಲೆಯಲ್ಲಿ ಯಾವುದೇ ಸಾಕ್ಷಿದಾರರ ಸಹಿ ಇರುವುದಿಲ್ಲ, ಸದರಿ ದಾಖಲೆಯನ್ನು ನೋಟರೀಕರಣ ಮಾಡಲು ಅಥವಾ ಸಾಕ್ಷಿದಾರರ ಸಹಿ ಪಡೆಯಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈ ಪ್ರಕರಣಕ್ಕಾಗಿ ಸುಳ್ಳು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.